

ಷೋಡಶಿಯರು ಸುತ್ತಾಡುತ್ತಿರುತ್ತಾರೆ. ಒಂಟಿಯಾಗಿ ಬರುವ ತರುಣರು ಅವರ ಕೈ ಕೈ ಹಿಡಿದು ಸಾಗಬಹುದು. ಕಾಫಿ ಕುಡಿಯಬಹುದು. ವಾಯುವಿಹಾರ ಮಾಡಬಹುದು. ಯಾವ ಹುಡುಗಿಯ ಜತೆ ಕಾಲ ಕಳೆಯಬೇಕು ಎನ್ನುವುದು ತರುಣರಿಗೆ ಬಿಟ್ಟ ಆಯ್ಕೆ. ಎಲ್ಲಕ್ಕೂ ಇಂತಿಷ್ಟು ಎಂದು ದರ ನಿಗದಿಯಾಗಿದೆ. ಕೈ ಹಿಡಿಯಲಿಷ್ಟು, ಕುಳಿತು ಕಾಫಿ ಹೀರಲಿಷ್ಟು. ಆಮೇಲೆ ಅಕ್ಕ–ಪಕ್ಕ ಕುಳಿತು ಆಕಾಶ ನೋಡಲಿಷ್ಟು. ಕೊನೆಗೆ, ತರುಣಿಯ ತೊಡೆ ಮೇಲೆ ಮಲಗಿ ವಿರಮಿಸಲು ಇನ್ನಷ್ಟು... ಇಂಥ ವಿವರಗಳನ್ನು ಕಿಯರನ್ ಬರೆದ ಲೇಖನ ಒಳಗೊಂಡಿತ್ತು.

ಈ ಬರಹವನ್ನು ಆಧರಿಸಿಯೇ ಬಿಬಿಸಿ 'ಯಂಗ್ ಸೆಕ್ಸ್ ಫಾರ್ ಸೇಲ್ ಇನ್ ಜಪಾನ್' ಎಂಬ ಮೂರು ಸಾಕ್ಷ್ಯಚಿತ್ರಗಳನ್ನು ನಿರ್ಮಿಸಿತು. ಸ್ಟ್ಯಾಸಿ ಡೂಲೆ ಎನ್ನುವವರು 'ಜೆಕೆ ಅಲೆ'ಗೆ ಭೇಟಿ ನೀಡಿ ಈ ಸಾಕ್ಷ್ಯಚಿತ್ರ ತಯಾರಿಸಿದರು. ಇಷ್ಟದ ಹುಡುಗಿಯ ಜತೆ ಕುಳಿತು ಕಂಠಪೂರ್ತಿ ಮದ್ಯಪಾನ ಮಾಡಲು ಅಲ್ಲಿ ಆಗ ನಿಗದಿಯಾಗಿದ್ದ ದರ ನಲವತ್ತು ನಿಮಿಷಕ್ಕೆ 35 ಪೌಂಡ್. ಅಲ್ಲಿ ಸೇವೆಯಲ್ಲಿ ತೊಡಗಿದ್ದ ಕೆಲವು ಷೋಡಶಿಯರನ್ನು ಮಾತನಾಡಿಸಿದರು. ಚಿಕ್ಕಪ್ರಾಯದ ಹೆಣ್ಣುಮಕ್ಕಳು ಇಂಥದೊಂದು ಉದ್ಯಮದ ಭಾಗವಾಗುವುದು ಹೇಗೆ, ತರುಣರು ಅಲ್ಲಿಗೆ ಯಾವೆಲ್ಲ ಉದ್ದೇಶಗಳಿಗಾಗಿ ಬರುತ್ತಾರೆ ಎನ್ನುವುದರ ಸೂಕ್ಷ್ಮ ಅಂಶಗಳೆಲ್ಲ ಸಾಕ್ಷ್ಯಚಿತ್ರಗಳಲ್ಲಿ ದಾಖಲಾದವು. ಅಲ್ಲಿನ ಈ ವಹಿವಾಟು ಕಾನೂನಾತ್ಮಕ ಎನ್ನುವುದು ಇನ್ನೊಂದು ಆಸಕ್ತಿಕರ ಅಂಶ.

## ಭಾವನಾತ್ಮಕ ನಂಟಿನ ಹೊಸ ಪೇಟೆ

ಸಾಂತ್ವನ ಸುಖವನ್ನು ಒದಗಿಸುವ ಸೇವೆಯ ಭಾಗವಾಗಿಯೇ ಕೆಲವು ಬ್ಲಾಗ್‌ಗಳು ಜಪಾನ್‌ನಲ್ಲಿ ತರುಣರ ಮಾನಸಿಕ ನೆಮ್ಮದಿಗಾಗಿ ಹುಟ್ಟಿಕೊಂಡವು. ಯೂಟ್ಯೂಬ್‌ನಲ್ಲಿ 'V ICE' ಎಂಬ ಚಾನೆಲ್‌ನಲ್ಲಿ ಯುವಕರು ದೊಡ್ಡ ಮಟ್ಟದ ಹಣ ತೆತ್ತು, ಪರಿಚಯವೇ ಇರದ ಹುಡುಗಿಯ ತೊಡೆಮೇಲೆ ಮಲಗಿ ತಮ್ಮ ಕಷ್ಟಗಳನ್ನು ಹೇಗೆಲ್ಲ ಹೇಳಿಕೊಳ್ಳುತ್ತಾರೆ ಎನ್ನುವುದನ್ನೀಗ ನೋಡಬಹುದಾಗಿದೆ. ಅಂಥ ಹುಡುಗರಿಗೆ ಅಥವಾ ಹುಡುಗಿಯರಿಗೆ ಸೇವೆ ಒದಗಿಸುವ ಸಂಸ್ಥೆಗಳು ಅದಕ್ಕಾಗಿಯೇ ಒಂದಿಷ್ಟು ತರುಣ–ತರುಣಿಯರನ್ನು ತರಬೇತುಗೊಳಿಸುತ್ತಾರೆ. ಕಾಮಾಕಾಂಕ್ಷೆ ಇಲ್ಲದೆ,

**'ಕ್ಯಾಸ್‌ಪರ್ಸ್ಕಿ' ಎಂಬ ಸೈಬರ್ ಸೆಕ್ಯುರಿಟಿ ಸಂಸ್ಥೆ ನಡೆಸಿದ ಸಮೀಕ್ಷೆಯ ಪ್ರಕಾರ ತಂತ್ರಜ್ಞಾನ ಹಾಗೂ ಒಂಟಿತನಕ್ಕೆ ಶೇ. 56ಕ್ಕೂ ಹೆಚ್ಚು ಮಂದಿಯಲ್ಲಿ ಸಂಬಂಧವಿದೆ. ಕೋವಿಡ್ ಸಾಂಕ್ರಾಮಿಕ ರೋಗ ಶುರುವಾಗುವ ಮೊದಲು ಇದ್ದಂತಹ ಅಂಕಿಅಂಶ ಇದು. ಈ ವರ್ಷ ಜನವರಿಯಲ್ಲಿ ಬಿಡುಗಡೆ ಮಾಡಿದ ವರದಿಯನ್ವಯ ಈ ಪ್ರತಿಶತ ಇನ್ನಷ್ಟು ಹೆಚ್ಚಾಗಿದೆ. ಜತೆಗೆ ವಿವಿಧ ವಯೋಮಾನದವರಿಗೆ ವಿಸ್ತೃತಗೊಂಡಿದೆ.**